

ಹೇಳಬಾರ್ದಣ್ಣಾ' ಅಂತ ಕೇಳ್ತಾನೆ ಇದ್ದಳು ಕಣೊ. ನೀನು ಸಿಕ್ಕಿದ್ರೆ ತಾನೆ ಹೇಳೋದು ಕೇಳೋದು'' ಅಂದು ಕಣ್ಣು ಕಿರಿದುಗೊಳಿಸಿಕೊಂಡ.

ಕಾಲಕ್ಕೆ ಬದುಕಿನ ಪುಟಗಳನ್ನು ಮುಚ್ಚಿಡುವುದೂ ಗೊತ್ತು; ಬಿಚ್ಚಿಡುವುದು ಗೊತ್ತು. ಇದೇನು ವಿಸ್ಮಯವೊ ವಿಷಾದವೊ ಗೊತ್ತಾಗುತ್ತಿಲ್ಲ...

ಆ ದಿನಗಳನ್ನು ಮತ್ತೆ ನಾನು ಹೊಂದಿಸಿ ನೋಡಲೇ ಇಲ್ಲ. ಅವುಗಳಿಗೆ ಪರದೆ ಕವುಚಿ ಮುಂದೆ ಬಂದುಬಿಟ್ಟೆ!

ಎದೆ ಭಾರವಾಯಿತು. ಈಗಲಾದರೂ ಗೌರಿಯನ್ನು ನೋಡಬೇಕು. ನೋಡದೆ ಸಮಾಧಾನವಾಗದು ಅಂತನಿಸಿ, ''ಗೌರಿ ಹೆಂಗಿದ್ದಾಳೆ'' ಅಂದೆ.

''ಈಗ ಅವಳೆಲ್ಲಿ? ಎರಡು ವರ್ಷ ಆಯ್ತು. ಗಟ್ಟಿಗಿತ್ತಿ, ಕೊನ್‌ಕೊನೆಗೆ ಸವೆದುಬಿಟ್ಟಳು. ಯಾವ ಡಾಕ್ಟರಿಗೆ ತೋರಿಸಿದ್ರೂ ಕಾಯಿಲೆ ಏನೂ ಇಲ್ವಲ್ಲ ಅನ್ನೋರು. ಮಲಗಿದೋಳು ಏಳಲಿಲ್ಲ. 'ನಿನ್ಗೆ ಹೇಳಣ್ಣ ಒಮ್ಮೆಬಂದು ಹೋಗ್ಲಿ' ಅಂದಿದ್ದಳು ಕಣೊ ಶಿವರಾಜ'' ಅಂದ ಬಹು ವೇದನೆಯಿಂದ.

ನನ್ನ ಕೈಲಿದ್ದ ಎಳನೀರು ದುಪ್ಪನೆ ಕೆಳ ಕುಸಿಯಿತು. ಓಡಿ ಬಂದ ಅಂಜಲಿ, ''ಯಾಕೆ ಅಂಕಲ್ ಅವ್ವನ ನೆನಪಾಯ್ತಾ?'' ಅಂದಳು. ಆಶ್ಚರ್ಯದಿಂದ ಅವಳನ್ನು ನೋಡಿದೆ. ಹೌದು ಅಂತ ಹೇಳಲಾಗಲಿಲ್ಲ. ನಿರಾಶೆ ಮತ್ತು ಸಂಕಟ ಮಾತನ್ನು ಗಂಟಲಲ್ಲಿ ಕಟ್ಟಿ ನಿಲ್ಲಿಸಿದವು. ಅಂಜಲಿ ಕಣ್ಣಂಚಿನ ನೀರನ್ನು ಒರೆಸಿಕೊಂಡು, ''ಅದು ಮಣ್ಣಾಯ್ತು ಬಿಡಿ. ಈ ಎಳ್‌ನೀರು ತಕೊಳ್ಳಿ'' ಅಂತ ತನ್ನದನ್ನು ಕೈಗಿಟ್ಟಳು.